| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಐವನ್ ಡಿಸೋಜಾ - (ವಿಧಾನ ಸಭೆಯಿಂದ ಚುನಾಯಿತರಾದವರು ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **142 (155)** |
| ಉತ್ತರಿಸಬೇಕಾದ ದಿನಾಂಕ | : | 28.01.2026 |
| ಉತ್ತರಿಸಬೇಕಾದ ಸಚಿವರು | : | ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಮಧ್ಯ ಗ್ರಾಮದಲ್ಲಿ ಕೆ.ಹೆಚ್.ಬಿ. ಕರ್ನಾಟಕ ವಸತಿ ನಿಗಮದ ಮೂಲಕ ಸೈಟುಗಳನ್ನು ನೀಡಲು ಹಣ ಪಡೆದು ಸೈಟುಗಳನ್ನು ನೀಡದಿರುವುದರಿಂದ ಅನೇಕರು ವಸತಿ ಹೊಂದಬೇಕೆಂಬ ಜನರ ಬೇಡಿಕೆಗೆ ಸರ್ಕಾರ ಸಂಬಂಧಿಸಿದೆ ಇರಲು ಕಾರಣವೇನು: ಅರ್ಜಿದಾರರಿಂದ ಮುಂಗಡ ಹಣವನ್ನು ಪಡೆದುಕೊಂಡು ಸೈಟ್‌ಗಳನ್ನು ನೀಡದಿರಲು ಕಾರಣವೇನು :</td><td>ಕರ್ನಾಟಕ ಗೃಹ ಮಂಡಳಿ ವತಿಯಿಂದ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಸುರತ್ಕಲ್ ಹೋಬಳಿ, ಮಧ್ಯಗ್ರಾಮದಲ್ಲಿ ಅನುಪಾತದ ಪಾಲುದಾರಿಕೆಯಡಿ ವಸತಿ ಯೋಜನೆಯನ್ನು ಕೈಗೊಳ್ಳಲು ಖಾಸಗಿ ಜಮೀನು ಮಾಲೀಕರಿಂದ ಪ್ರಸ್ತಾವನೆ ಬಂದಿದ್ದು, ಯೋಜನೆ ಕೈಗೊಳ್ಳುವ ಮುನ್ನ ಸಾರ್ವಜನಿಕರಿಂದ ಬೇಡಿಕೆ ಸಮೀಕ್ಷೆಯನ್ನು ದಿನಾಂಕ 19.11.2022 ರಂದು ಕರೆಯಲಾಗಿರುತ್ತದೆ. ಸದರಿ ಬೇಡಿಕೆ ಸಮೀಕ್ಷೆಗೆ ಸ್ಪಂಧಿಸಿ ಒಟ್ಟು 557 ಅರ್ಜಿಗಳು ಸ್ವೀಕೃತವಾಗಿರುತ್ತದೆ.<br><br>ಸದರಿ ಜಮೀನಿನ ಭೂಮಾಲೀಕರು ಪ್ರತ್ಯೇಕವಾಗಿ ಎರಡು ಭಾಗಗಳಲ್ಲಿ ಜಮೀನು ಪ್ರಸ್ತಾವನೆ ಸಲ್ಲಿಸಿದ್ದು, ಎರಡು ಜಮೀನುಗಳ ಮಧ್ಯೆ ಸಂಪರ್ಕ ರಸ್ತೆ ಇರುವುದಿಲ್ಲ. ಎರಡು ಜಮೀನುಗಳ ಮಧ್ಯೆ ಸರ್ಕಾರಿ ಜಮೀನಿದ್ದು, ಸರ್ಕಾರಿ ಜಮೀನಿನಲ್ಲಿ ಸಂಪರ್ಕ ರಸ್ತೆಗೆ ಮಾತ್ರ ಉಪಯೋಗಿಸಿಕೊಳ್ಳಲು ದಿನಾಂಕ 27.06.2025 ರಂದು ಸಹಾಯಕ ಆಯುಕ್ತರು, ಮಂಗಳೂರು ಉಪವಿಭಾಗ ರವರು ಸಂಪರ್ಕ ರಸ್ತೆ ಮಂಜೂರು ಮಾಡಿರುತ್ತಾರೆ.<br><br>ದಿನಾಂಕ 15.02.2025 ರಂದು ತಾಂತ್ರಿಕ ಪರಿಣಿತರ ಸಮಿತಿಯು ಸದರಿ ಜಮೀನನ್ನು ಪರಿವೀಕ್ಷಣೆ ನಡೆಸಿದ ಸಮಯದಲ್ಲಿ ಸದರಿ ಜಮೀನು ತುಂಬಾ ಏರು ಪೇರು ಇರುವುದರಿಂದ ಯೋಜನೆಯ ಆರ್ಥಿಕ ಕಾರ್ಯಸಾಧ್ಯತೆ ಅನುಗುಣವಾಗಿ ಒಂದೇ ಹಂತದಲ್ಲಿ ಬಡಾವಣೆ ನಿರ್ಮಾಣ ಮಾಡುವ ಬದಲು ವಿವಿಧ ಹಂತಗಳಲ್ಲಿ ಬಡಾವಣೆಯನ್ನು ನಿರ್ಮಾಣ ಮಾಡುವ ಕುರಿತು ಕಾರ್ಯ ಯೋಜನೆ ರೂಪಿಸುವುದರಿಂದ ಮಂಡಳಿಗೆ ಆರ್ಥಿಕವಾಗಿ ನಷ್ಟವಾಗುವುದಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ.<br><br>ತಾಂತ್ರಿಕ ಸಮಿತಿಯ ವರದಿಯಂತೆ ವಿವರವಾದ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿದ್ದು, ಸದರಿ ವಸತಿ ಯೋಜನೆಯನ್ನು ಮಂಡಳಿಗೆ ಆರ್ಥಿಕವಾಗಿ ಕಾರ್ಯಸಾಧ್ಯತೆ ಆಗುವ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.</td></tr>
<tr><td>ಆ)</td><td>ವಸತಿ ಅಭಿವೃದ್ಧಿ ನಿಗಮದಿಂದ ರಾಜ್ಯದ ಜನರಿಗೆ ಮೋಸ ಆಗುತ್ತಿದೆ ಎಂಬ ದೂರುಗಳಿದ್ದು ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು:(ವಿವರ ಒದಗಿಸುವುದು )</td><td>ಈ ಸಂಬಂಧ ಮಂಡಳಿಯಲ್ಲಿ ಯಾವುದೇ ದೂರುಗಳು ಇರುವುದಿಲ್ಲ</td></tr>
<tr><td>ಇ)</td><td>ಮುಂಗಡ ಪಡೆದ ಸೈಟುಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು )</td><td>ಸದರಿ ಬಡಾವಣೆಗೆ ಮುಂಗಡ ಪಡೆದ ಅರ್ಜಿದಾರರ ಸಂಖ್ಯೆ:557
<table>
<tr><th>ಕ್ರ.ಸಂ</th><th>ವರ್ಗ</th><th>ಅರ್ಜಿಗಳ ಸಂಖ್ಯೆ</th></tr>
<tr><td>1.</td><td>ಇ.ಡಬ್ಲ್ಯೂ.ಎಸ್.</td><td>47</td></tr>
<tr><td>2.</td><td>ಎಲ್.ಐ.ಜಿ.</td><td>222</td></tr>
<tr><td>3.</td><td>ಎಂ.ಐ.ಜಿ.</td><td>142</td></tr>
<tr><td>4.</td><td>ಹೆಚ್.ಐ.ಜಿ-1</td><td>146</td></tr>
<tr><td></td><td>ಒಟ್ಟು</td><td>557</td></tr>
</table></td></tr>
</table>

ಸಂಖ್ಯೆ:ವಇ 16 ಕಗ್ಯಮಂ 2026

(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು